" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು

**6ನೇ ಫೆಬ್ರವರಿ 2017,**
**ಸೋಮವಾರ.**

## ವಿಷಯಾನುಕ್ರಮಣಿಕೆ

1. ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿ ಮಂಡನೆ

2. ಸಂತಾಪ ಸೂಚನೆ
   ವಿಧಾನ ಸಭೆಯ ಮಾನ್ಯ ಸದಸ್ಯರು ಹಾಗೂ ಸಹಕಾರ ಮತ್ತು ಸಕ್ಕರೆ ಸಚಿವರಾಗಿದ್ದ ಶ್ರೀ ಹೆಚ್.ಎಸ್.ಮಹದೇವಪ್ರಸಾದ್, ಮಾಜಿ ಸಚಿವರುಗಳಾದ ಡಾ:ಎಂ.ಶಂಕರ ನಾಯಕ್ ಮತ್ತು ಶ್ರೀ ರಾಜವರ್ಧನ್ ಅವರುಗಳು ನಿಧನರಾಗಿರುವ ಬಗ್ಗೆ

   – ಡಾ:ಜಿ.ಪರಮೇಶ್ವರ್ (ಸಭಾ ನಾಯಕರು)
   – ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(01)06-02-2017 12-20 ಎಂಎಂ–ಆರ್‌ಎನ್

# ಕರ್ನಾಟಕ ವಿಧಾನ ಪರಿಷತ್ತು

***ಸೋಮವಾರ, 06ನೇ ಫೆಬ್ರವರಿ 2017***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 12 ಗಂಟೆ 26 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(02)06–02–2017 12–30 ಡಿಎಸ್–ವಿಕೆ**

**ಸಭಾಪತಿಯವರು:–** 133ನೇ ಅಧಿವೇಶನಕ್ಕೆ ಎಲ್ಲರಿಗೂ ಸ್ವಾಗತ ಕೋರುತ್ತೇನೆ. ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು.

## 1. ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ_ಭಾಷಣದ ಪ್ರತಿ ಮಂಡನೆ

**ಕಾರ್ಯದರ್ಶಿ:–** ಸನ್ಮಾನ್ಯ ಸಭಾಪತಿಯವರೆ, ತಮ್ಮ ಅನುಮತಿಯೊಂದಿಗೆ ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**(ರಾಜ್ಯಪಾಲರ ಭಾಷಣದ ಕನ್ನಡ, ಆಂಗ್ಲ ಮತ್ತು ಹಿಂದಿ ಪ್ರತಿಗಳನ್ನು ಲಗತ್ತಿಸಲಾಗಿದೆ)**

## 2. ಸಂತಾಪ ಸೂಚನೆ

ವಿಷಯ: ವಿಧಾನ ಸಭೆಯ ಮಾನ್ಯ ಸದಸ್ಯರು ಹಾಗೂ ಸಹಕಾರ ಮತ್ತು ಸಕ್ಕರೆ ಸಚಿವರಾಗಿದ್ದ ಶ್ರೀ ಹೆಚ್.ಎಸ್.ಮಹದೇವಪ್ರಸಾದ್, ಮಾಜಿ ಸಚಿವರುಗಳಾದ ಡಾ:ಎಂ.ಶಂಕರ ನಾಯಕ್ ಮತ್ತು ಶ್ರೀ ರಾಜವರ್ಧನ್ ಅವರುಗಳು ನಿಧನರಾಗಿರುವ ಬಗ್ಗೆ.

–––––

**ಸಭಾಪತಿಯವರು:–** ಕಳೆದ ಬಾರಿ ನಾವು ಅಧಿವೇಶನ ಸೇರಿ, ಪುನಃ ಅಧಿವೇಶನ ಸೇರುವುದರೊಳಗೆ ಕೆಲವು ಹಿರಿಯರು ನಮ್ಮನ್ನು ಅಗಲಿದ್ದಾರೆ. ಅದರಲ್ಲೂ ಪ್ರಸಕ್ತ ಸಚಿವರಾಗಿದ್ದಂಥವರೊಬ್ಬರು ದುರಾದೃಷ್ಟವಶಾತ್ ನಮ್ಮನ್ನು ಅಗಲಿದ್ದಾರೆ. ಅವರ ಬಗ್ಗೆ ನಾನು ಸಂತಾಪ ಸೂಚನೆಯನ್ನು ಮಂಡಿಸುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಸಂತಾಪ ಸೂಚನೆಯ ಪ್ರತಿಯನ್ನು ಲಗತ್ತಿಸಲಾಗಿದೆ)

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಪ್ರತಿಯೊಂದು ಬಾರಿ ನಾವು ಅಧಿವೇಶನ ಸೇರಿದಾಗ ಪ್ರಥಮವಾಗಿಯೇ ನಮಗೆ ಬಹಳ ನೋವಿನ ಸಂಗತಿಯನ್ನು ಹಂಚಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತಿದೆ. ಇದು ಮೊದಲಿನಿಂದಲೂ ಕೂಡ ನಡೆದುಕೊಂಡು ಬಂದಿದೆ ಎಂದು ಕಾಣಿಸುತ್ತದೆ. ಮಾನ್ಯ ಮಹದೇವಪ್ರಸಾದ್‌ರವರು ಕಳೆದ ಅಧಿವೇಶನದಲ್ಲಿ ನಮ್ಮ ಜೊತೆಯಲ್ಲಿಯೇ ಇದ್ದುಕೊಂಡು, ನಮ್ಮ ಪಕ್ಕದಲ್ಲೇ ಕುಳಿತುಕೊಂಡು, ಸದಸ್ಯರುಗಳು ಕೇಳಿದಂತಹ ಪ್ರಶ್ನೆಗಳಿಗೆ ಮತ್ತು ಅವರು ವಹಿಸಿಕೊಂಡಿದ್ದಂತಹ ಇಲಾಖೆಯ ಬಗ್ಗೆ ಮಾಹಿತಿಯನ್ನು ಕೊಡುತ್ತಿದ್ದರು. ಇವತ್ತು ಅವರು ನಮ್ಮ ಜೊತೆಯಲ್ಲಿ ಇಲ್ಲ ಎಂದು ಹೇಳಿದರೆ ನಮಗೆ ನಂಬಿಕೆಯೇ ಬರುತ್ತಿಲ್ಲ. ನನಗೆ 3ನೇ ತಾರೀಖು ಬೆಳಿಗ್ಗೆ ಸುಮಾರು 9 ಗಂಟೆಗೆ ಚಿಕ್ಕಮಗಳೂರಿನಿಂದ ದೂರವಾಣಿ ಕರೆ ಬಂದಿತು. ನಮ್ಮ ಪಕ್ಷದ ಜಿಲ್ಲಾ ಅಧ್ಯಕ್ಷರು ನನಗೆ ದೂರವಾಣಿ ಕರೆ ಮಾಡಿ ಮಹದೇವಪ್ರಸಾದ್‌ರವರು ತೀರಿಕೊಂಡುಬಿಟ್ಟಿದ್ದಾರೆ ಎಂದು ಹೇಳಿದಾಗ ನನಗೆ ನಂಬುವುದಕ್ಕೇ ಆಗಲಿಲ್ಲ. ಎಷ್ಟು ಚೆನ್ನಾಗಿ ಲವಲವಿಕೆಯಿಂದ ಓಡಾಡಿಕೊಂಡಿದ್ದಂತಹ ವ್ಯಕ್ತಿ, ಬಹಳ ಆರೋಗ್ಯದಿಂದ ಇದ್ದಂತಹ ವ್ಯಕ್ತಿಗೆ ಇದೇನಪ್ಪಾ ಹೀಗಾಗಿದೆ, ಅವರಿಗೆ ಏನಾಯಿತು ಎಂದು ಕೇಳಿದೆ. ಅವರು ಚಿಕ್ಕಮಗಳೂರಿನ ಪ್ರವಾಸದಲ್ಲಿದ್ದರು. ಕೊಪ್ಪದಲ್ಲಿ ಒಂದು ಕಾರ್ಯಕ್ರಮ ಇತ್ತು. ಆ ಕಾರ್ಯಕ್ರಮಕ್ಕೆ ನಾನು ಚಿಕ್ಕಮಗಳೂರಿನ ಉಸ್ತುವಾರಿ ಸಚಿವನಾಗಿ ಮಾರನೆ ದಿನ ಬೆಳಿಗ್ಗೆ ಹೋಗಬೇಕಾಗಿತ್ತು. ಆದರೆ ನಾನು ಹೋಗುವುದಕ್ಕೆ ಆಗಲಿಲ್ಲ. ಅವೊತ್ತು ಕಾರ್ಯಕ್ರಮದ ಹಿಂದಿನ ದಿವಸ ಅವರು ಅಲ್ಲಿಗೆ ಹೋಗಿ ತಂಗಿದ್ದಾರೆ. ಅವರ ಸ್ನೇಹಿತರೊಬ್ಬರ ಮನೆಯಲ್ಲಿ ಊಟ ಮಾಡಿ ರಾತ್ರಿ ಹತ್ತು ಗಂಟೆಯವರೆಗೂ ಅವರ ಜೊತೆಯಲ್ಲಿ ಮಾತನಾಡಿ ಬಂದು ನಮ್ಮ ಪಕ್ಷದ ಅಧ್ಯಕ್ಷರಿಗೆ ಬೆಳಿಗ್ಗೆ ಎಂಟೂವರೆಗೆ ಬನ್ನಿ ಎಂದು ಹೇಳಿದ್ದಾರೆ. ನಾವು ಇಲ್ಲಿಂದ ಒಂಬತ್ತು ಗಂಟೆಗೆ ಬಿಡೋಣ, ಕಾರ್ಯಕ್ರಮಕ್ಕೆ ಹೋಗೋಣ ಎಂದು ಹೇಳಿದ್ದಾರೆ. ಅವರು ಎಂಟೂವರೆಗೆ ಹೋಗಿದ್ದಾರೆ. ಎಂಟೂವರೆಗೆ ಹೋಗಿ ಬಾಗಿಲು ತಟ್ಟಿದರೆ, ಬಾಗಿಲು ತೆಗೆದಿಲ್ಲ, ಮತ್ತೆ ಪ್ರಯತ್ನ ಮಾಡಿದ್ದಾರೆ, ಇನ್ನು ಸ್ವಲ್ಪ ಹೊತ್ತು ಮಲಗಿರಬಹುದು ಅಥವಾ ಬಾತ್‌ರೂಮ್‌ಗೆ ಹೋಗಿರಬಹುದು ಎಂದು ಸ್ವಲ್ಪ ಹೊತ್ತಿನ ನಂತರ ಮತ್ತೆ ಪ್ರಯತ್ನ ಮಾಡಿದ್ದಾರೆ, ಆಗಲೂ ಬಾಗಿಲು ತೆಗೆಯಲಿಲ್ಲ. ಆಮೇಲೆ ಅವರಿಗೆ ಸ್ವಲ್ಪ ಅನುಮಾನ ಬರುತ್ತದೆ, ಆಗ ಹೋಟೆಲ್‌ರವರನ್ನು ಕರೆದು ನೋಡಿ ಏನೂ ರೆಸ್ಪಾನ್ಸ್ ಬರುತ್ತಿಲ್ಲ, ನಿಮ್ಮ ಹತ್ತಿರ ಮಾಸ್ಟರ್ ಕೀ ಇದ್ದರೆ ಬಾಗಿಲು ತೆಗೆದುನೋಡಿ ಎಂದು ಹೇಳಿದ್ದಾರೆ. ಆ ಮಾಸ್ಟರ್ ಕೀಯಿಂದ ತೆಗೆದು ನೋಡಿದರೆ ಅವರು ಹಾಗೆ ಮಲಗಿಕೊಂಡುಬಿಟ್ಟಿದ್ದಾರೆ. ಅವರು ಮಲಗಿದ್ದಂತಹ ಸ್ಥಳದಲ್ಲಿ ಅವರು ಒದ್ದಾಡಿರುವುದಾಗಲಿ ಅಥವಾ ಅವರಿಗೆ ಏನಾದರೂ ಒಂದು ರೀತಿಯಲ್ಲಿ ನೋವಾಗಿರುವಂತಹ ಯಾವುದೇ ಚಿಹ್ನೆ ಕೂಡ ಇಲ್ಲ. ಹೇಗೆ ಮಲಗಿದ್ದರೋ ಹಾಗೆ ಮಲಗಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ ಯಾವಾಗ ಸಾವು ನಮ್ಮ ಹತ್ತಿರ ಬರುತ್ತದೆ ಎಂದು ಯಾರಿಗೂ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೂಡ ಊಹೆ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಮಾನ್ಯ ಮಹದೇವಪ್ರಸಾದ್‌ರವರು ನಾನು ನೋಡಿದ್ದಂತಹ ಒಬ್ಬ ಅತ್ಯಂತ ಸಜ್ಜನ ರಾಜಕಾರಣಿ. ಬಹಳ ಸಹೃದಯಿ ಬಂಧು. ನಮ್ಮ ಜೊತೆಯಲ್ಲೆಲ್ಲಾ ಎಷ್ಟು ಚೆನ್ನಾಗಿ ಇರುತ್ತಿದ್ದರು ಎಂದರೆ ಅವರು ಇವತ್ತು ನಮ್ಮ ಜೊತೆಯಲ್ಲಿಲ್ಲ ಎಂದು ನನಗೆ ನಂಬಿಕೆಯೇ ಬರುತ್ತಿಲ್ಲ. ಬಹಳ ಸಂದರ್ಭದಲ್ಲಿ ಅವರು ನಮ್ಮ ಪಕ್ಷದ ಜಿಲ್ಲಾ ಅಧ್ಯಕ್ಷರಾಗಿದ್ದರು.

(03)06–02–2017 12–40 ಕೆಹೆಚ್–ವಿಕೆ

(ಸಭಾಪತಿಯವರ ಉಪಸ್ಥಿತಿ)

**ಡಾ॥ ಜಿ.ಪರಮೇಶ್ವರ (ಮುಂದು):–**

ಚುನಾವಣೆಗೆ ಮೊದಲು ಅವರು ನಮ್ಮ ಪಕ್ಷದ ಜಿಲ್ಲಾ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಅವರು ಮೊದಲು ಜನತಾ ದಳ ಪಕ್ಷದಲ್ಲಿ ಇದ್ದರು. ಅವರು ಯಾವುದೇ ಪಕ್ಷದಲ್ಲಿದ್ದರೂ ಕೂಡ ಅವರು ಅತ್ಯಂತ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿರುವಂತಹ ವ್ಯಕ್ತಿತ್ವವನ್ನು ಹೊಂದಿರುವಂತಹವರು. ನಮ್ಮ ಪಕ್ಷಕ್ಕೆ ಬಂದ ಮೇಲೆ, ನಮ್ಮ ಪಕ್ಷದಲ್ಲಿ ಜಿಲ್ಲಾ ಅಧ್ಯಕ್ಷರಾದ ಮೇಲೆ ಇಡೀ ಜಿಲ್ಲೆಯನ್ನು ಸಂಘಟನೆ ಮಾಡಿ ಕೆಲಸ ಮಾಡಿದಂತಹವರು. ಅವರ ನಿಧನ ನಮ್ಮೆಲ್ಲರಿಗೂ ಬಹಳ ನೋವು ಉಂಟು ಮಾಡಿದೆ. ಅವರು ಸಚಿವರಾಗಿದ್ದಾಗ ಬಹಳ ಕ್ರಿಯಾಶೀಲವಾಗಿ ಕೆಲಸ ಮಾಡಿದ್ದಾರೆ. ಅವರು ಸಹಕಾರಿ ಇಲಾಖೆಯಲ್ಲಿ ಅನೇಕ ಬದಲಾವಣೆಗಳನ್ನು ತರುವಾಗ ಮತ್ತು ಸಕ್ಕರೆ ಕಾರ್ಖಾನೆಯವರ ಜೊತೆಯಲ್ಲಿ ಸಂಘರ್ಷ ಮಾಡುವಂತಹ ಸಂದರ್ಭ ಬಂದಾಗ ಯಾವುದೇ ಮುಲಾಜು ಇಲ್ಲದೆ ಕೆಲವು ಕಠಿಣವಾದ ತೀರ್ಮಾನಗಳನ್ನು ತೆಗೆದುಕೊಳ್ಳುವ ರೀತಿಯಲ್ಲಿ ಅವರು ಕೆಲಸವನ್ನು ಮಾಡಿದ್ದಾರೆ. ನನಗಂತೂ ವೈಯಕ್ತಿಕವಾಗಿ ಬಹಳ ನೋವಾಗಿದೆ. ಇವತ್ತು ನಾವು ಅವರನ್ನು ಸ್ಮರಿಸಬೇಕಾಗುತ್ತದೆ. ಏಕೆಂದರೆ ನಮ್ಮ ಸರ್ಕಾರದಲ್ಲಿ ಇವರು ಒಬ್ಬ ಕ್ರಿಯಾಶೀಲ ಸಚಿವರಾಗಿದ್ದರು. ನಾನು ವೈಯಕ್ತಿಕವಾಗಿ ಇವರನ್ನು ಭವಿಷ್ಯದ ನಾಯಕ ಎಂದು ತಿಳಿದುಕೊಂಡಿದ್ದೆ. ಅನೇಕ ಸಂದರ್ಭದಲ್ಲಿ ನಾನು ಭಾಷಣ ಮಾಡುವಂತಹ ಸಂದರ್ಭದಲ್ಲಿ ನಮ್ಮ ಪಕ್ಷದ ವೇದಿಕೆಯಲ್ಲಿ ಇರಬಹುದು ಮತ್ತು ಬೇರೆ ಸಂದರ್ಭದಲ್ಲೂ ಕೂಡ ಅವರನ್ನು ಭವಿಷ್ಯದ ನಾಯಕ ಎಂದು ಹೇಳುತ್ತಿದೆ. ಅವರಿಗೆ ಕೇವಲ ಐವತ್ತೇಂಟು ವರ್ಷ, ಬಹುಶಃ ನನ್ನ ದೃಷ್ಟಿಯಲ್ಲಿ ಸಾಯುವಂತಹ ವಯಸ್ಸು ಅದಲ್ಲಾ. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ ಮತ್ತು ಅವರ ಕುಟುಂಬ ವರ್ಗದವರಿಗೂ ಕೂಡ ಭಗವಂತನು ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಕರುಣಿಸಲಿ ಎಂದು ಆಶಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಡಾ॥ ಎಂ.ಶಂಕರ ನಾಯಕ್ ಅವರು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದಾಗ ನನಗೆ ಅವರ ಪರಿಚಯವಾಗಿತ್ತು. ನಮ್ಮ ಸಂಸ್ಥೆಯ ವತಿಯಿಂದ ಖಾಸಗಿ ವೈದ್ಯಕೀಯ ಕಾಲೇಜನ್ನು ನಡೆಸುತ್ತಿದ್ದೆವು. ಹಾಗಾಗಿ ನಾನು ಅವರ ಹತ್ತಿರ ಹೋಗಿ ಏನಾದರೂ ಕೆಲಸ ಇದ್ದರೆ ಕೇಳಿ ಕೆಲಸ ಮಾಡಿಸಿಕೊಂಡು ಬರುತ್ತಿದ್ದೆ. ಒಂದು ರೀತಿಯಲ್ಲಿ ಸಾಮಾನ್ಯವಾಗಿ ರಾಜಕಾರಣಿ ಅಂದಾಕ್ಷಣ ಬೇರೆ ಬೇರೆ ಕಲ್ಪನೆಗಳು ಬರುತ್ತದೆ. ಆದರೆ ಅದೆಲ್ಲವನ್ನೂ ಮೀರಿ ಇದ್ದಂತಹ ಒಬ್ಬ ಸರಳ ವ್ಯಕ್ತಿ ಡಾ॥ ಎಂ.ಶಂಕರ ನಾಯಕ್‌ರವರು ಎಂದು ಹೇಳಬಹುದು. ಕೆಲವು ದಿವಸ ನಮ್ಮ ಪಕ್ಷಕ್ಕೂ ಸೇರಿದ್ದರು. ತಮಗೆ ಗೊತ್ತಿರುವ ಹಾಗೆ ರಾಜಕಾರಣದಲ್ಲಿ ಕೆಲವು ಬದಲಾವಣೆಗಳಾಗುತ್ತದೆ. ಅವರು ನಮ್ಮ ಪಕ್ಷಕ್ಕೂ ಕೂಡ ಸೇರಿ ಕೆಲಸ ಮಾಡುತ್ತಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಾಗಿಯೂ ಕೂಡ ಕೆಲಸ ಮಾಡಿದ್ದರು. ಅವರು ಕೂಡ ನಮ್ಮನ್ನಗಲಿ ಹೋಗಿದ್ದಾರೆ.

ಹಾಗೂ ಶ್ರೀ ರಾಜವರ್ಧನ್‌ರವರ ನಿಧನದಿಂದ ನಮ್ಮ ಮನಸ್ಸಿಗೆ ಬಹಳ ನೋವುಂಟು ಮಾಡಿದೆ. ನಾನು ಆಕಸ್ಮಿಕವಾಗಿ ರಾಜಕಾರಣಕ್ಕೆ ಬಂದವನು. ನನಗೆ 1989 ರಲ್ಲಿ ಅಂದಿನ ಪ್ರಧಾನ ಮಂತ್ರಿಯವರಾಗಿದ್ದ ರಾಜೀವ್ ಗಾಂಧಿರವರು ಕರೆದು ರಾಜಕಾರಣಕ್ಕೆ ಆಹ್ವಾನ ಮಾಡಿದಾಗ ವಿಧಾನಸಭಾ ಕ್ಷೇತ್ರವಾದ ಮಧುಗಿರಿ ಕ್ಷೇತ್ರದಲ್ಲಿ ಟಿಕೇಟ್ ಕೊಟ್ಟರು. ನನ್ನ ವಿರುದ್ಧ ಶ್ರೀ ರಾಜವರ್ಧನ್‌ರವರು ನಿಂತಿದ್ದರು. ಶ್ರೀ ರಾಜವರ್ಧನ್‌ರವರು ಸಚಿವರಾಗಿದ್ದವರು. ಅವರ ಎದುರುಗಡೆ ಪ್ರಥಮ ಬಾರಿಗೆ ಚುನಾವಣೆಗೆ ನಿಲ್ಲಬೇಕು ಎಂದರೆ ನನಗೆ ರಾಜಕಾರಣವೇ ಗೊತ್ತಿರಲಿಲ್ಲ. ಬಹಳಷ್ಟು ಜನರಿಗೆ ನನ್ನ ಮುಖ ಪರಿಚಯವೇ ಇರಲಿಲ್ಲ ಮತ್ತು ನನಗೆ ಆ ಕ್ಷೇತ್ರದಲ್ಲಿರುವ ಊರುಗಳ ಹೆಸರುಗಳೇ ಗೊತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಶ್ರೀ ರಾಜವರ್ಧನ್‌ರವರು ನನ್ನ ವಿರುದ್ಧವಾಗಿ ನಿಂತಿದ್ದರು. ಆ ಚುನಾವಣೆಯಲ್ಲಿ ಅವರ ವಿರುದ್ಧ ನಾನು ಜಯಗಳಿಸಿದ್ದೆ. ಅವರು ರಾಜಕಾರಣದಲ್ಲಿ ಅನೇಕ ಬದಲಾವಣೆಗಳ ಗಾಳಿಗೆ ತೂರಿದ್ದರು. ಶ್ರೀ ರಾಮಕೃಷ್ಣ ಹೆಗಡೆರವರು ಶ್ರೀ ರಾಜವರ್ಧನ್‌ರವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಂಡು ಅವರನ್ನು ಬಂದರು ಮತ್ತು ಮೀನುಗಾರಿಕೆ ಸಚಿವರನ್ನಾಗಿ ಮಾಡಿದರು. ಶ್ರೀ ರಾಮಕೃಷ್ಣ ಹೆಗಡೆರವರು ಕೇಂದ್ರದಲ್ಲಿ ವಾಣಿಜ್ಯ ಮಂತ್ರಿಯಾದಾಗ ಅವರನ್ನು IFFCO (Indian Farmers Fertiliser Cooperative Limited) ಸಂಸ್ಥೆಯಲ್ಲಿ ಅಧ್ಯಕ್ಷರನ್ನಾಗಿ ಮಾಡಿದ್ದರು. Fashion design ಗೆ ಸಂಬಂಧಪಟ್ಟ ಒಂದು ಸಂಸ್ಥೆಗೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಇಂದು ಅವರು ನಮ್ಮನ್ನು ಅಗಲಿದ್ದಾರೆ. ಶ್ರೀ ರಾಜವರ್ಧನ್‌ರವರು ಯಾವುದಕ್ಕೂ ಅಪೇಕ್ಷೆಪಡದೇ ಇರುವಂತಹ ವ್ಯಕ್ತಿ ಮತ್ತು ತುಂಬಾ ಸರಳವಾದ ವ್ಯಕ್ತಿಯಾಗಿದ್ದರು. ಮೂರು ಜನ ಬಹಳ ಸಜ್ಜನ ರಾಜಕಾರಣಿಗಳೆಂದು ಹೇಳಬಹುದು. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ ಮತ್ತು ಭಗವಂತ ಅವರ ಕುಟುಂಬದವರಿಗೆ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಕರುಣಿಸಲಿ. ನಾನು ಈ ನಿರ್ಣಯಕ್ಕೆ ಸಹಕರಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಸಂತಾಪ ಸೂಚನೆ ಮಂಡನೆಯನ್ನು ಮಾಡಿದ್ದಾರೆ. ಸಂತಾಪ ಸೂಚನೆ ಮಂಡನೆಗೆ ಅನುಮೋದನೆಯನ್ನು ಕೊಡುವಂತಹ ವ್ಯವಸ್ಥೆ ಇದೆ. ಕೈಯಲ್ಲಿ ಸಿಕ್ಕಿದಂತಹ ಅಧಿಕಾರವನ್ನು ಯಾವ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಾರೆ ಎನ್ನುವುದು ಬಹಳ ಮುಖ್ಯ. ಡಾ॥ ಜಿ.ಪರಮೇಶ್ವರ್‌ರವರು ಶ್ರೀ ಹೆಚ್.ಎಸ್.ಮಹದೇವಪ್ರಸಾದ್ ರವರ ಜೊತೆಯಲ್ಲಿ ಬಹಳ ಹೆಚ್ಚಿನ ಒಡನಾಟ ಇತ್ತು. ನನಗೆ ಅವರ ಜೊತೆಯಲ್ಲಿ ಒಡನಾಟ ತುಂಬಾ ಇರಲಿಲ್ಲ. ಆದರೆ ಒಂದು ಘಟನೆ ನನ್ನ ಜೀವನದಲ್ಲಿ ಒಂದು ಮಾರ್ಗದರ್ಶನ ಎಂದು ಭಾವಿಸುತ್ತೇನೆ. ನಾನು ಮಂತ್ರಿಯಾದಂತಹ ಸಂದರ್ಭದಲ್ಲಿ ನಡೆದಂತಹ ಘಟನೆ. ಶಿವಮೊಗ್ಗ ಜಿಲ್ಲೆಯ ಡಿ.ಸಿ.ಸಿ ಬ್ಯಾಂಕಿನ ವಿಷಯ ಎಲ್ಲರಿಗೂ ಗೊತ್ತಿದೆ. ಅಸಲಿ ಬಂಗಾರವನ್ನು ನಕಲಿ ಮಾಡಿ ಲೂಟಿ ಮಾಡಿದಂತಹ ವ್ಯವಸ್ಥೆ ಇದು ಮೇಲ್ನೋಟಕ್ಕೆ ಕಾಣುತ್ತಿದೆ. ನಾನು ಆ ಪಕ್ಷ ಈ ಪಕ್ಷ ಎಂದು ನೋಡುವುದಕ್ಕೆ ಹೋಗುವುದಿಲ್ಲ. ಅಸಲಿ ಬಂಗಾರವನ್ನು ನಕಲಿ ಮಾಡಿಕೊಂಡು ಭ್ರಷ್ಟಚಾರವಾಗಿದೆ ಎನ್ನುವುದರ ಬಗ್ಗೆ ಒತ್ತಡ ಬಂದಾಗ ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡಿ ಸಂಬಂಧಪಟ್ಟ ವ್ಯಕ್ತಿಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ನನಗೆ ನಂಬಿಕೆ ಇರಲಿಲ್ಲ. ಅವರಿಗೆ ಎಲ್ಲಾ ರೂಪದ ಆಸೆ–ಆಮಿಷಗಳನ್ನು ತೋರಿಸುತ್ತಾರೆ. ಹಾಗಾಗಿ ಇದರಲ್ಲಿ ನ್ಯಾಯ ಸಿಗುತ್ತದೆ ಎಂಬ ಕಲ್ಪನೆಯು ಸಹ ನನಗೆ ಇರಲಿಲ್ಲ. ನಾನು ಎರಡು–ಮೂರು ಸಾರಿ ವೈಯಕ್ತಿಕವಾಗಿ ಮಾತನಾಡಿದೆ. ನೀವು ಮಂತ್ರಿಗಳಾಗಿದ್ದೀರಿ ಇಲ್ಲಿ ಇಷ್ಟೊಂದು ಅನ್ಯಾಯವಾಗಿದೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರ ಎಂದು ಕೇಳಿದಾಗ, ಅವರು ಕ್ರಮ ತೆಗೆದುಕೊಳ್ಳುತ್ತೇನೆ ಅಥವಾ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಸಹ ಹೇಳಲಿಲ್ಲ. ಹಾಗಾಗಿ ನನ್ನ ಹತ್ತಿರ ಬಂದವರಿಗೆ ಇದು ಆಗುವ ಕೆಲಸ ಅಲ್ಲ ಬಿಟ್ಟುಬಿಡಿ ಎಂದು ಹೇಳುತ್ತಿದೆ. ಉತ್ತರ ಕೊಡುವಂತಹ ಸಂದರ್ಭದಲ್ಲಿ ತುಂಬಾ ಸ್ಪಷ್ಟವಾಗಿ ಹೇಳಿದರು ನಾನು ಅದಕ್ಕೋಸ್ಕರ ಹೇಳಿದೆ. ಮಂತ್ರಿಗಳು ಆಗುವವರಿಗೆ, ಮಂತ್ರಿಗಳು ಆಗಿರುವವರಿಗೆ ಚುನಾಯಿತ ಪ್ರತಿನಿಧಿಗಳಿಗೆ ಯಾವ ರೀತಿ ಇರಬೇಕು ಎಂಬುದನ್ನು ಒಂದೇ ಘಟನೆಯಲ್ಲಿ ಹೇಳಿದರು. ಇದರಲ್ಲಿ ಅನ್ಯಾಯವಾಗಿದೆ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ, ಸಂಬಂಧಪಟ್ಟ ವ್ಯಕ್ತಿಗಳ ಬಗ್ಗೆ ನಾನು ಇವತ್ತೇ ಆರ್ಡರ್ ಮಾಡುತ್ತಿದ್ದೇನೆ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಯಾವ ಯಾವ ಕಡೆಯಿಂದ ಎಷ್ಟೆಷ್ಟು ಒತ್ತಡಗಳು ಬರುತ್ತದೆ. ಏನೇನು ಆಸೆ ಆಮಿಷಗಳು ಬರುತ್ತದೆ. ನನಗೆ ಗೊತ್ತಿದ್ದು ಕೂಡ ನಾನು ನಿರಾಸೆಯಾಗಿದ್ದೇನೆ. ನಿಜಕ್ಕೂ ನಾವು ಇಂದು ಶ್ರೀ ಹೆಚ್.ಎಸ್.ಮಹದೇವಪ್ರಸಾದ್‌ರವರನ್ನು ನೆನಸಿಕೊಳ್ಳಬೇಕು. ಅಂತಹ ವ್ಯಕ್ತಿಗಳು ನಮಗೆ ಆದರ್ಶವಾಗಿದ್ದರು ಎಂದು ಒಪ್ಪಿಕೊಳ್ಳಬೇಕು. ಆ ರೀತಿ ನಮ್ಮ ಮುಂದಿನ ಜೀವನದಲ್ಲಿ ನಡೆಯಬೇಕು. ಒಳ್ಳೆಯ ವ್ಯಕ್ತಿಗಳನ್ನು ಭಗವಂತ ಬೇಗ ಕರೆಸಿಕೊಳ್ಳುತ್ತಾನೆ ಅನ್ನುವುದಕ್ಕೆ ಇದೊಂದು ಸಾಕ್ಷಿ. ರಾತ್ರಿಯಲ್ಲಿ ಮಲಗಿ ಬೆಳಿಗ್ಗೆ ಏಳಲಿಲ್ಲವೆಂದರೆ ನಿಜಕ್ಕೂ ಕೂಡ ಇದು ಆಶ್ಚರ್ಯವಾಗುತ್ತದೆ. ಆದರೆ ನಮ್ಮ ಗಮನಕ್ಕೆ ಬಂದಂತಹ ಪ್ರಕಾರದಲ್ಲಿ ಅವರು ಮಲಗಿದ್ದು, ಯಾವ ತೊಂದರೆನೂ ಅನುಭವಿಸದೇ ಪ್ರಾಣ ಬಿಟ್ಟಿದ್ದಾರೆ. ನಾನು ಕೂಡ ಸಭಾನಾಯಕರು ಹೇಳಿದ ಹಾಗೆ 3ನೇ ತಾರೀಖು ಅವರು ನಿಧನವಾದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಿಷಯ ತಿಳಿದಾಗ ಆಶ್ಚರ್ಯ ಮತ್ತು ದಿಗ್ಭ್ರಮೆಯಾಯಿತು. ಇವರು ಒಬ್ಬ ಪ್ರಾಮಾಣಿಕ ಮಂತ್ರಿಯಾಗಿದ್ದರು. ಯಾವುದೇ ಶ್ರದ್ಧಾಂಜಲಿಯನ್ನು ಅರ್ಪಿಸುವಂತಹ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಅವರನ್ನು ಹೊಗಳುತ್ತೇವೆ. ಆದರೆ ಪ್ರಾಮಾಣಿಕವಾಗಿದ್ದ ವ್ಯಕ್ತಿಗೆ ಇಷ್ಟು ಬೇಗ ಸಾವು ಬಂದಿದೆ ಎಂಬ ನೋವು ನನಗಾಗುತ್ತಿದೆ. ಇಂತಹ ವ್ಯಕ್ತಿಗಳು ಇನ್ನು ಇದ್ದು ಆಡಳಿತವನ್ನು ನಡೆಸಬೇಕಿತ್ತು. ಇನ್ನು ನ್ಯಾಯ ಕೊಡಬೇಕಿತ್ತು. ಅಂತಹ ವ್ಯಕ್ತಿಗಳನ್ನು ಕಳೆದುಕೊಂಡು ಬಿಟ್ಟೆವು ಎಂದು ನನಗೆ ನಿಜಕ್ಕೂ ದು:ಖವಾಗುತ್ತಿದೆ. ಭಗವಂತ ನಿಜಕ್ಕೂ ಕೂಡ ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಮತ್ತು ಅವರ ಕುಟುಂಬಕ್ಕೆ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಕರುಣಿಸಲಿ.

(ಮುಂದು...)

**(04)06-02-2017 12-50 ಬಿಕೆಪಿ-ಜಿಆರ್**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು. . )**

ಡಾ॥ ಎಂ. ಶಂಕರನಾಯಕ್‌ರವರು ನಮ್ಮ ಪಕ್ಷದಲ್ಲಿಯೂ ಸಹ ಸ್ವಲ್ಪ ದಿವಸ ಇದ್ದರು. ಅವರು ಬಹಳ ಸ್ನೇಹಜೀವಿಯಾಗಿದ್ದರು. ಬಹಳ ಸ್ನೇಹಜೀವಿ ಎಂದರೆ ಅವರು ಮಂತ್ರಿಯಾಗಿದ್ದರು ಎನ್ನುವಂತಹ ಕಲ್ಪನೆ ಮಾಡಲಿಕ್ಕೆ ಆಗುವುದಿಲ್ಲ. ಅಂತಹ ಶಂಕರನಾಯಕ್‌ರವರು ಇವತ್ತು ನಮ್ಮನ್ನು ಅಗಲಿದ್ದಾರೆ.

ಮತ್ತೆ, ಶ್ರೀಯುತ ರಾಜವರ್ಧನ್‌ರವರ ಬಗ್ಗೆಯೂ ಸಹ ನಾನು ಸಾಕಷ್ಟು ವಿಚಾರಗಳನ್ನು ಕೇಳಿದ್ದೆ. ಇಲ್ಲವೆಂದು ಹೇಳುವುದಿಲ್ಲ. ಅವರ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಸಭಾನಾಯಕರು ತಿಳಿಸಿದ ಹಾಗೆ ಮಂತ್ರಿಗಳಾಗಿಯೂ ಕೂಡ ಸಾಕಷ್ಟು ಕೆಲಸ ಮಾಡಿದ್ದಾರಲ್ಲದೆ, ಸರಳ ಸಜ್ಜನಿಕೆಯ ರಾಜಕಾರಣಿ ಎಂದು ಅವರನ್ನು ಸಭಾನಾಯಕರು ವರ್ಣನೆ ಮಾಡಿದ್ದಾರೆ. ಇವತ್ತು, ಏನು ಈ ಮೂರು ಜನ ನಮ್ಮನ್ನು ಅಗಲಿದ್ದಾರೆ, ಅವರೆಲ್ಲರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲಿ, ಮತ್ತು ಅವರ ಕುಟುಂಬಗಳಿಗೆ ಉಂಟಾಗಿರುವಂತಹ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಹೇಳಿ, ನಾನು ಅವರುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಉಪ ಸಭಾಪತಿಯವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಾಗಿದ್ದ ದಿವಂಗತ ಹೆಚ್.ಎಸ್. ಮಹದೇವ್ ಪ್ರಸಾದ್‌ರವರ ವಿಚಾರವಾಗಿ ಒಂದು ಅಂಶವನ್ನು ಇಲ್ಲಿ ಸೇರಿಸಬೇಕಾಗಿದೆ. ದಿವಂಗತ ಮಹದೇವ್ ಪ್ರಸಾದ್‌ರವರು ಶ್ರೀ ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರಾಗಿ, ಭಕ್ತಾಧಿಗಳ ಮೂಲಭೂತ ಸೌಕರ್ಯಕ್ಕಾಗಿ ಬಹಳಷ್ಟು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದ್ದು, ಇದನ್ನು ಇದರಲ್ಲಿ ಸೇರ್ಪಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಖಂಡಿತ ಸೇರ್ಪಡೆ ಮಾಡಲಾಗುವುದು. ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಪರಮಾತ್ಮ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವುದು.

**(ಸದನವು ಮಧ್ಯಾಹ್ನ 12 ಗಂಟೆ 54 ನಿಮಿಷಕ್ಕೆ ಮುಕ್ತಾಯಗೊಂಡು ಪುನ:<br>ದಿನಾಂಕ 7ನೇ ಫೆಬ್ರವರಿ ಮಾಹೆ 2017ರ ಮಂಗಳವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)**

*********

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "